ಪುರಾಣ ನಿರೂಪಿಸುತ್ತಿದ್ದ.

ಹಳೆಯ ಹತ್ಯಾರಗಳ ಪರಿಚಯಿಸುವುದರಲ್ಲೆ ಕಳಚಿಹೋದ ಕಸುಬಿನ ಕುರಿತಾದ ಆಚಾರಿಯ ವ್ಯಾಕುಲತೆ ಪ್ರಕಟವಾಗುತ್ತಿತ್ತು. ಅದೊಂದು ಮನೆತನದ ಅಮೂಲ್ಯ ಆಸ್ತಿ ಎಂಬಂತೆ ಸಂಗಾತ ಪೆಟ್ಟಿಗೆಯಲ್ಲಿಟ್ಟು ಬಂದ. ಪಕ್ಕದ ತಗಡಿನ ಶೆಡ್ಡಿಗೆ ಕರೆದೊಯ್ದ. ಅವನಿಗೆ ಗತ ವೈಭವವನ್ನು ತೋರಿಸುವ ಹುಚ್ಚು. ಅದು ಕುಲುಮೆಯ ಶಾಲೆ. ತ್ರಿಕೋನಾಕಾರದ ಮಣ್ಣಿನ ಒಲೆಯಲ್ಲಿ ನಂದಿದ ಮಸಿ ಕೆಂಡಗಳಿದ್ದವು; ಅದರ ಹಿಂದೆ ತಿದಿ ಜಗ್ಗಿ ಗಾಳಿ ಊದಲು ಸರಪಳಿಯ ಹಿಡಿಕೆ. ಜಗ್ಗಿದಾಗ ತಿರುಗುವ ಸೈಕಲ್ ರಿಮ್; ತುಕ್ಕು ಹಿಡಿದ ಕಟರ್ ಮಶಿನ್; ಒಲೆಯಾಚೆ ಹಿತ್ತಾಳೆಯ ನೀರಿನ ತಪಲೆ. ಕೆಲಸಕ್ಕೆ ಕೂರುವಾಗ ಆಚಾರಿ ಉಪಯೋಗಿಸುವ ಮಣೆ; ಕಾಸಿ ಬಡಿಯಲು ಚಪ್ಪಟೆ ಕಲ್ಲು. "ಚಾ ತಣಿತದೆ ಬನ್ನಿ" ಎಂದು ಕರೆಯಲು ಬಂದ ಹೆಂಡತಿಯನ್ನು ತಿದಿ ಎಳೆಯಲು ಕೂರಿಸಿದ. ಬೆಂಕಿ ಮಾಡಿ, ತಿದಿ ಜಗ್ಗಿ, ಕುಲುಮೆಯಲ್ಲಿ ನೀಲಿ ಜ್ವಾಲೆ ಚಿಮ್ಮಿ ಕತ್ತಿ ಕಾಯಿಸಲಿಟ್ಟ. ಕೆಂಪಗೆ ಜ್ವಲಿಸುವ ಕತ್ತಿಯ ಅಲಗನ್ನು ಸುತ್ತಿಗೆಯಲ್ಲಿ ಜಪ್ಪಿ, ಮತ್ತೆ ಕಾಯಿಸಿ ತಪಲೆಯ ನೀರಿನಲ್ಲಿ ಮುಳುಗಿಸಿ ಚೊಂಯ್ಗುಡಿಸಿ ಹಬೆ ಎಬ್ಬಿಸಿದ. ಹೀಗೆ ಅಭಿನಯಿಸಿ ಕಳೆದದ್ದನ್ನು ಮರು ಸೃಷ್ಟಿಸಿ ಅದೇನೊ ವಿಚಿತ್ರ ಸಂಕಟವನ್ನು ದಾಟಿ ಈಚೆ ಬಂದು, "ಹದ ಹಾಕೋದಕ್ಕೆ ನಮ್ಮ ಮಂಜನೇ ಸೈ" ಎಂದ. ಯಕ್ಷಗಾನದ ಅರ್ಥಧಾರಿಗಳು ಭಾಗವತರಿಗೆ ಪದ್ಯದ ಪಲ್ಲವಿ ಎತ್ತಿಕೊಡುವಂತೆ ನಂದಾಚಾರಿ ಬಂದಂಥ ಕಾರ್ಯವನ್ನು ನೆನಪಿಸಿದ.

"ಮಂಜಪ್ಪ ಕಾಣೋದಿಲ್ಲ ಎಲ್ಲಿದ್ದಾನೆ?"

"ಎಲ್ಲಿದ್ದಾನೊ ಆ ದೇವ್ರಿಗೇ ಗೊತ್ತು. ಕಳೆದ ಬಾರಿ ನೆಗಸು ಬಂದು ಹೋದ್ಮೇಲೆ ಮನಸಿಗೇನೊ ಹಚ್ಕಂಡು ಬೇಜಾರಿನಲ್ಲಿ ಊರು ಬಿಟ್ಟು ಹೋದವನ ಪತ್ತೆಯೇ ಇಲ್ಲ."

"ಊರು ಬಿಡುವಂಥಾದ್ದು ಏನಾಯ್ತು?"

"ಆ ಕಥೆ ಏನು ಕೇಳ್ತೀರಿ ಚಾ ತಕಳಿ" ಎಂದು ನಂದಾಚಾರಿ ಮಾತಿಗಾರಂಭಿಸಿದ.

"ಹೋದ ವರ್ಷ ಅಕಾಲ ಮಳೆ ಬಿತ್ತು ನೋಡಿ ಆವಾಗ ಎಲ್ಲ ಉಪರಾಟಿ ಆಯ್ತು. ಊರ ಜನಕ್ಕೆ ನೆಗಸು ಹೊಸದಲ್ಲ. ನೆಂಟರೊ ಹಬ್ಬವೊ ಮಾವಿಗೆ ಹೂವೊ ಜಡ್ಡುಜಾಪತ್ರೊ ಬಂದು ಹೋದಂಗ ಅದು ಬಂದು ಹೋಗ್ತದೆ. ಹಿಂದಿನವರು ಗಂಗಾ ದೇವಿಗೆ ಸಿಟ್ಟು ಬಂತು ಏನೋ ತಪ್ಪಾಯ್ತು ಅದಕ್ಕೆ ನೆರೆ ಹಾವಳಿ ಎಂದು ಮತ್ತೊಂದು ಸರ್ತಿ ತೇರು ಕಟ್ಟಿ ಹರಕೆ ತಪ್ಪ ದಂಡ ಉಡಿಗೆ ಹಾಕಿ, ಚಿಂತೆಯಿಲ್ದೆ ನಿದ್ರೆ ಮಾಡ್ತಿದರು. ನೀರು ಮನೆ ಮೆಟ್ಟಿಲ ತನಕ ಬಂದು ವಾಪಸ್ಸಾಗ್ತಿತ್ತು. ಡಿಸೆಂಬರ ತಿಂಗಳಲ್ಲಿ ನಾಗರ ಪಂಚಮಿ ಮಳೆ ಹೊಯ್ತದೆ ಅಂದ್ರೆ ನಂಬೋದಕ್ಕೆ ಆಗ್ತದಾ. ಹತ್ತು ಹಗಲುರಾತ್ರಿ ಹಿಡಿದ ಮಳೆ ಹೊಳು ಕೊಡ್ಲೇ ಇಲ್ಲ. ಬಾನೇ ಹರಿದು ಬಿದ್ದಾಂಗೆ ನಾನಂತೂ ನನ್ನ ಆಯುಷ್ಯದಲ್ಲಿ ಅಂಥ ಪ್ರಳಯ ನೋಡ್ಲೇ ಇಲ್ಲ. ಹೊಳೇಲಿ ಮುಳ್ಕಂಡು ಬಾಳ್ವೆ ಮಾಡ್ದ ನಮ್ಮ ಕೈಕಾಲು ಬಿಟ್ಟು ಹೋಯ್ತು. ಎಂಥ ಕಪ್ಪು ಮೋಡ ಮನೇಲಿ ರಾತ್ರಿ ದೀಪ ಹಚ್ಕಂಡಾಂಗೆ ಚಿಮಣಿ ನಂದಿಸುವಾಂಗಿಲ್ಲ. ಗಾಳಿ ಅವತಾರ ನೋಡಿ ನಮಗೆ ಉಳಿಗಾಲ ಇಲ್ಲ ಎಂದು ಅನಿಸಿ ಹೋಗಿತ್ತು. ಮನೆ ಮಾಡು ಹಾರ್ತು; ಮರ ಬಿತ್ತು. ಬತ್ತದ ಗೊಣಬೆ ಮುಳುಗ್ತು. ಕೊಟ್ಟಿಗೆ ಮಾಡಿನ ಮ್ಯಾಲೆ ಕೂತಿದ್ದ ಕೋಳಿ ಹಿತ್ತಲ ಬಾಗ್ಲಿಂದ ಮನೆ ಒಳ್ಗೆ ಬಂದ್ವು. ಮಾತು ಬಿದ್ದು ಹೋಗಿತ್ತು. ಮಾತಾಡಿದ್ರೂ ಅಬ್ಬರದಲ್ಲಿ ಏನೂ ಕೇಳ್ತಿರಲಿಲ್ಲ. ಹೊಳೆಗಂತು ಮದ ಏರಿತ್ತು. ಕೆಂಪು ಸೆಳೆತ ಸುಳಿ ಹತ್ರ ಹೋಗೋದಕ್ಕೆ ಹೆದ್ರಿಕೆ. ಗಟ್ಟದ ಕಡೆಯಿಂದ ಮಾರಾಶಿ ಮರದ ಕುಂಟೆ, ತೆಂಗಿನ ಕಾಯಿ, ದನಗಳನ್ನ ತೇಲಿಸ್ಕಂಡು ಬಂತು. ಮೊದಲೆಲ್ಲ ಕಾಯಿ, ಕುಂಟೆ ಹಿಡಿತಿದ್ರು ಈ ಸಲ